(ಶ್ರೀ ಬಿ. ಹುಚ್ಚೇಗೌಡ)

ಳಗೇ ಲೈಸೆನ್ಸ್ ಬಂದಿರುವುದು ತಮ್ಮ ಗಮನಕ್ಕೆ ಬಂದಿಲ್ಲವೇ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಅಂಥವು ಯಾವುವೂ ಸರ್ಕಾರದ ಗಮನಕ್ಕೆ ಬಂದಿಲ್ಲ.

Sri K. HANUMANTHAIYA.—You need not answer questions where allegations are made.

ಶ್ರೀ ಬಿ. ಹುಚ್ಚೇಗೌಡ.—ಕೆಲವರಿಗೆ ಜಾಗ್ರತೆ ಲೈಸೆನ್ಸ್ ಬಂದು, ಕೆಲವರಿಗೆ ನಿಧಾನವಾಗಿ ಬರಲು ಕಾರಣವೇನು?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಏನಾದಾನ್ನದ ವಾಗಿರತಕ್ಕ ಅರ್ಜಿಗಳ ವಿಚಾರದಲ್ಲಿ ನ್ಯೂನ್ಯ ನಿಧಾನ ವಾಗುತ್ತದೆ.

ಶ್ರೀ ಬಿ. ಹುಚ್ಚೇಗೌಡ.—ಏನಾದಿಏಲ್ಲದೆ ಇರತಕ್ಕ ಅರ್ಜಿಗಳೂ ಸಹ ಎರಡು ವರ್ಷಕ್ಕೆ ಮೇಲ್ಪಟ್ಟು ಇತ್ಯರ್ಥವಾಗದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಹೆಚ್. ಎಂ. ಚೆನ್ನಬಸಪ್ಪ.—ಏನಾದಾನ್ನದ ಏಲ್ಲದೆ ಇದ್ದ ಪಕ್ಷದಲ್ಲಿ ನಿಧಾನವಾಗುವುದಕ್ಕೆ ಕಾರಣ ಏಲ್ಲ.

ಶ್ರೀ ಬಿ. ಹುಚ್ಚೇಗೌಡ.—ಇಂಥವುಗಳನ್ನು ತನಿಖೆ ಮಾಡುವುದಕ್ಕೆ efficiency audit ಅಥವಾ ಬೇರೆ ಕಮಿಟಿಯನ್ನು ನೇಮಿಸಿ ವರದಿಯನ್ನು ತರಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲವೇ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಅದಕ್ಕೆ ಅವಕಾಶ ಏಲ್ಲ, ನಾವು ಪರಿಶೀಲನೆ ಮಾಡಿರುವುದರಲ್ಲಿ ವಿವಾದ ಏಲ್ಲದೆ ನಿಧಾನವಾಗಿರತಕ್ಕ ಕೇಸುಗಳು ನಮ್ಮ ಮುಂದೆ ಇಲ್ಲ.

ಶ್ರೀ ಬಿ. ಹುಚ್ಚೇಗೌಡ.—ಅಂಥವನ್ನು ತಮ್ಮ ಮುಂದೆ ಇಟ್ಟರೆ ಅದಕ್ಕೆ ಏನು ಪರಿಹಾರ ಮಾಡುತ್ತೀರಿ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ನನ್ನ ಹತ್ತಿರ ಫೈಲ್ ಇದೆ. ಇದರಲ್ಲ ವಿವಾದಕ್ಕೆ ಒಳಪಟ್ಟಿರುವವರದು ಮಾತ್ರ ನಿಧಾನವಾಗುತ್ತದೆ. ವಿವಾದವಿಲ್ಲದೆ ಇರುವ ವರದು ಇದರಲ್ಲಿಲ್ಲ.

ಶ್ರೀ ಬಿ. ಹುಚ್ಚೇಗೌಡ.—ತಾವು ಬಂದಮೇಲೆ ಎಷ್ಟು ಮಾಡಿರುತ್ತೀರಿ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ತಾವು ಪ್ರಶ್ನೆಯನ್ನು ಕೇಳಿದ್ದರೆ ತಿಳಿಸುತ್ತಿದ್ದೆ.

D. D. T. Spraying in Sira Taluk.

Q.—357. Sri B. N. RAME GOWDA (Sira).—

Will the Government be pleased to state :—

(*a*) whether any representation was made to spray D. D. T. in all the villages of Sira taluk ;

(*b*) if so, the action taken to that effect till now ?

A.—Sri T. CHANNIAH (Minister for Public Health and Local Self-Government).—

(*a*) Yes.

(*b*) The Public Health Department has after undertaking a special survey in such of the villages as were affected with malaria, treated persons suffering from malaria by administering anti-malaria drugs and sprayed the houses in these villages with D.D.T.

ಶ್ರೀ ಬಿ. ಎಕ್. ರಾಮೇಗೌಡ.—ಎಷ್ಟು ಗ್ರಾಮ ಗಳಲ್ಲಿ ಡಿ.ಡಿ.ಟಿ. ಸ್ಪ್ರೇ ಮಾಡಿದ್ದೀರಿ?

ಶ್ರೀ ಟಿ. ಚನ್ನಯ್ಯ.—ಹನ್ನೊಂದು ಗ್ರಾಮಗಳಲ್ಲಿ ಮಾಡಲಾಗಿದೆ.

ಶ್ರೀ ಬಿ. ಎಕ್. ರಾಮೇಗೌಡ.—ಡಿ. ಡಿ. ಟಿ. ಸ್ಪ್ರೇ ಮಾಡಿದೆ ಎಂದು ಹೇಳತಕ್ಕ ಗ್ರಾಮಗಳು ಮಾಮೂ ರಾಗಿ ಪ್ರತಿವರ್ಷವೂ ಸ್ಪ್ರೇ ಮಾಡುತ್ತ ಇರತಕ್ಕ ಗ್ರಾಮಗಳಲ್ಲವೇ?

ಶ್ರೀ ಟಿ. ಚನ್ನಯ್ಯ.—ಮಲೇರಿಯಾ ಇದೆ ಎಂದು ತಿಳಿದರೆ ಆರೋಗ್ಯ ಇಲಾಖೆಯವರು ರಿಪೋರ್ಟ್ ತರಿಸಿ ಕೊಂಡು, ಅಂಥ ಗ್ರಾಮಗಳಿಗೆ ಮಾತ್ರ ಸ್ಪ್ರೇ ಮಾಡು ತ್ತಿದ್ದಾರೆ.

ಶ್ರೀ ಬಿ. ಎಕ್. ರಾಮೇಗೌಡ.—ಪ್ರತಿವರ್ಷವೂ ಮೂಮೂಲಾಗಿ ಡಿ.ಡಿ.ಟಿ. ಸ್ಪ್ರೇ ಮಾಡುತ್ತ ಇರತಕ್ಕ ಗ್ರಾಮಗಳೇ ಅಲ್ಲವೇ ಈಗ ಸ್ಪ್ರೇ ಮಾಡಿರುವುದು?

ಶ್ರೀ ಟಿ. ಚನ್ನಯ್ಯ.—ಮಲೇರಿಯಾ ಇಲ್ಲದೆ ಇದ್ದರೂ ಸಹ ಪ್ರತಿ ವರ್ಷವೂ ಸ್ಪ್ರೇ ಮಾಡಬೇಕು ಎಂದು ಖಚಿತವಾಗಿ ನಿಗದಿ ಮಾಡಿಲ್ಲ. ಎಲ್ಲಿ ಮಲೇರಿಯಾ ಹೆಚ್ಚಾಗಿದೆ ಎಂದು ಕಂಡುಬಂದರೆ ಅಂಥ ಸ್ಥಳಗಳಲ್ಲಿ ಮಾತ್ರ ಡಿ.ಡಿ.ಟಿ. ಸ್ಪ್ರೇ ಮಾಡಬೇಕೆಂದಿದೆ. ಪ್ರತಿ ವರ್ಷವೂ ಮಾಡಬೇಕೆಂದಿಲ್ಲ.

ಶ್ರೀ ಬಿ. ಎಕ್. ರಾಮೇಗೌಡ.—ಈ ವರ್ಷ ಸಿರಾ ತಾಲ್ಲೂಕಿನಲ್ಲಿ ಮಳೆ ಜಾಸ್ತಿಯಾಗಿ, ಮಲೇರಿಯಾ ಹಾವಳಿ ಜಾಸ್ತಿಯಾಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಚನ್ನಯ್ಯ.—ಮಳೆ ಜಾಸ್ತಿಯಾಗಿ ಬಂದ ಕಾರಣದಿಂದ ಮಲೇರಿಯಾ ರೋಗ ಹೆಚ್ಚಾಗಿರುವುದರ ದೆಸೆಯಿಂದ ಹನ್ನೊಂದು ಗ್ರಾಮಗಳಲ್ಲಿ ಡಿ. ಡಿ. ಟಿ. ಸ್ಪ್ರೇ ಮಾಡಲಾಗಿದೆ.

ಶ್ರೀ ಬಿ. ಎಕ್. ರಾಮೇಗೌಡ.—ಎಲ್ಲ ಗ್ರಾಮ ಗಳಲ್ಲಿಯೂ ಮಲೇರಿಯಾ ಸೋಂಕು ಇದೆ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಚನ್ನಯ್ಯ.—ಎಲ್ಲ ಗ್ರಾಮಗಳಲ್ಲಿಯೂ ಇಲ್ಲ. ಆದರೆ ಅನೇಕ ಗ್ರಾಮ ಗಳಲ್ಲಿ ಮಲೇರಿಯಾ ಸೋಂಕು ಇದೆ ಎಂದು ಗೊತ್ತಿದೆ. ಆದರೆ ಯಾರು ಯಾರು ಮಲೇರಿಯಾ ಖಾಯಿಲೆಗೆ ಒಳಗಾಗಿ ದ್ದಾರೆಯೋ ಅವರುಗಳಿಗೆಲ್ಲ ಔಷಧಿಯನ್ನು ಕೊಟ್ಟು ಕಾಯಿಲೆ ಗುಣಪಡಿಸುವುದಕ್ಕೆ ಪ್ರಯತ್ನ ಮಾಡಲಾಗಿದೆ.

ಶ್ರೀ ಬಿ. ಎಕ್. ರಾಮೇಗೌಡ.—ಎಲ್ಲ ಗ್ರಾಮಗಳ ಲ್ಲಿಯೂ ಮಲೇರಿಯಾ ಸೋಂಕು ಇದೆ. ಅದಕ್ಕಾಗಿ ಡಿ.ಡಿ.ಟಿ. ಸ್ಪ್ರೇ ಮಾಡಬೇಕು ಎಂದು ಮನವಿ ಮಾಡಿ ರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಚನ್ನಯ್ಯ.—ಬಂದಿದೆ.

ಶ್ರೀ ಬಿ. ಎಕ್. ರಾಮೇಗೌಡ.—ಅದರಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ?

ಶ್ರೀ ಟಿ. ಚನ್ನಯ್ಯ.—ನಿಮ್ಮ ರಿಪೋರ್ಟ್ ಮತ್ತು ಗ್ರಾಮಸ್ಥರ ಮನವಿ ಬಂದನಂತರ ಆರೋಗ್ಯ ಇಲಾಖೆಯ ಅಧಿಕಾರಿಗಳು ಕಾರ್ಯಕ್ರಮ ತೆಗೆದು ಕೊಂಡಿದ್ದಾರೆ. ಕೆಲವು ಗ್ರಾಮಗಳಲ್ಲಿ ಡಿ.ಡಿ.ಟಿ. ಸ್ಪ್ರೇ ಮಾಡಿದ್ದಾರೆ. ಮುಂದೇನಾದರೂ ಮಲೇ

ರಿಯಾ ಖಾಯಿಲೆ ಹೆಚ್ಚಾಗಿದೆ ಎಂದು ಕಂಡುಬಂದ ಪಕ್ಷದಲ್ಲಿ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಬಿ. ಎಚ್. ರಾಮೇಗೌಡ.—ಮಲೇರಿಯಾ ಸೋಂಕು ಪ್ರತಿಯೊಂದು ಹಳ್ಳಿಯಲ್ಲಿಯೂ ಜಾಸ್ತಿ ಯಾಗಿರುವುದರಿಂದ ಈಗಲಾದರೂ ಡಿ.ಡಿ.ಟಿ. ಸ್ಪ್ರೇ ಮಾಡಿಸುವುದಕ್ಕೆ ಏರ್ಪಾಡು ಮಾಡುತ್ತೀರಾ? ಆ ಗ್ರಾಮಗಳಲ್ಲಿ ಒಂದುಸಲ ಸ್ಪ್ರೇ ಮಾಡಿ, ಇನ್ನೊಂದು ಸಲ ಸ್ಪ್ರೇ ಮಾಡದೆ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಚನ್ನಯ್ಯ.—ಒಂದುಸಲ ಸ್ಪ್ರೇ ಮಾಡಿರುವಾಗ ಪುನಃ ಸ್ಪ್ರೇ ಮಾಡಬೇಕೆಂದಿಲ್ಲ.

ಶ್ರೀ ಸಿ. ಟಿ. ಹನುಮಂತಯ್ಯ.—ಡಿ.ಡಿ.ಟಿ. ಸ್ಪ್ರೇ ಮಾಡಿಸಬೇಕು ಎಂದು ಈ ಗ್ರಾಮಗಳವರು ಮನವಿ ಮಾಡಿಕೊಂಡಿರುವುದು ಗೊತ್ತಿದೆಯೆ?

ಶ್ರೀ ಟಿ. ಚನ್ನಯ್ಯ.—ಅನೇಕ ಮೈದಾನ ಪ್ರದೇಶ ಗಳಿಂದಲೂ ಕೂಡ ಜನಗಳು ಆಗಾಗ್ಗೆ ಡಿ.ಡಿ.ಟಿ. ಸ್ಪ್ರೇ ಮಾಡಿಸಬೇಕೆಂದು ಅರ್ಜಿಗಳನ್ನು ಸರ್ಕಾರಕ್ಕೂ ಮತ್ತು ಇಲಾಖೆಗೂ ಕಳುಹಿಸುತ್ತಿದ್ದಾರೆ. ಮಲೇರಿಯಾ ಹಾವಳಿ ಹೆಚ್ಚಾಗಿದೆ ಎಂದು ಕಂಡುಬಂದ ಸ್ಥಳಗಳಲ್ಲಿ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದಾರೆ.

ಶ್ರೀ ವಿ. ಆರ್. ನಾಯ್ಡು.—ಡಿ.ಡಿ.ಟಿ. ಸ್ಪ್ರೇ ಮಾಡಿದರೆ ಹುಳುಗಳು, ಸೊಳ್ಳೆಗಳು ಸಾಯುತ್ತವೆ ಎನ್ನುವುದು ತಮ್ಮ ಅಭಿಪ್ರಾಯವೇ?

ಅಧ್ಯಕ್ಷರು.—ಹೌದು.

ಶ್ರೀ ವಿ. ಆರ್. ನಾಯ್ಡು.—ನನ್ನ ಸಚಿವರು ಹೇಳಿದ್ದರೆ ಚೆನ್ನಾಗಿತ್ತು. ಆರೋಗ್ಯ ಇಲಾಖೆಯವರು ಡಿ.ಡಿ.ಟಿ. ಸ್ಪ್ರೇ ಮಾಡಿದರೆ ಸೊಳ್ಳೆಗಳು ಸಾಯುತ್ತವೆ; ಮಲೇರಿಯಾ ಬರುವುದಿಲ್ಲವೆಂದು ಹೇಳುತ್ತಾರೆ. ಆದರೆ ಡಿ.ಡಿ.ಟಿ. ಪ್ರಯೋಗ ಮಾಡಿದ ತಕ್ಷಣ ಸೊಳ್ಳೆಗಳು ಅದನ್ನು ತಿಂದು ಆರೋಗ್ಯವಾಗಿರುತ್ತವೆ. ಸೊಳ್ಳೆ ಗಳು ಸಾಯುವುದೇ ಇಲ್ಲ . . .

ಅಧ್ಯಕ್ಷರು.—ತಾವು ತಮ್ಮ ಅಭಿಪ್ರಾಯವನ್ನು ಬೇರೆ ಕಾಲದಲ್ಲಿ ಹೇಳಬಹುದು. ಈಗ ಪ್ರಶ್ನೆಗಳ ಕಾಲ.

ಶ್ರೀ ಶಿವನಂಜೇಗೌಡ.—ಹಿಂದೆ ಡಿ.ಡಿ.ಟಿ. ಸ್ಪ್ರೇ ಮಾಡಿದರೆ ಸೊಳ್ಳೆಗಳು, ನೊಣಗಳು ಸಾಯುತ್ತಿದ್ದುವು. ಈಗ ಡಿ.ಡಿ.ಟಿ. ಸ್ಪ್ರೇ ಮಾಡಿದರೆ ಮೂರು ದಿವಸಗಳ ಲ್ಲಿಯೇ ಸೊಳ್ಳೆ, ನೊಣ ಮುಂತಾದುವು ಬರುತ್ತವೆ. ಈಗಿನ ಡಿ.ಡಿ.ಟಿ.ಯಿಂದ ಪ್ರಯೋಜನವಿಲ್ಲವಾದ್ದರಿಂದ ತಾವು ಏನಾದರೂ ಕಾರ್ಯಕ್ರಮ ತೆಗೆದುಕೊಂಡು ಒಳ್ಳೆಯ ಡಿ.ಡಿ.ಟಿ. ಪ್ರಯೋಗ ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ?

ಶ್ರೀ ಟಿ. ಚನ್ನಯ್ಯ ಈಗ ಡಿ.ಡಿ.ಟಿ. ಸ್ಪ್ರೇ ಮಾಡಿರುತಕ ಸ್ಥಳಗಳಲ್ಲಿ ಅದರ effect ಸರಿಯಾಗಿಲ್ಲ, ಸೊಳ್ಳೆಗಳು ಸಾಯುತ್ತಿಲ್ಲವೆಂದು ತಾವು ಹೇಳುವು ದಾದರೆ, concentration ಜಾಸ್ತಿ ಮಾಡಿ ಸೊಳ್ಳೆಗಳು ಸಾಯುವಂತೆ ಮಾಡಲು ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ಇಲಾಖೆಯವರಿಗೆ ಸೂಚನೆ ಕೊಡುತ್ತೇನೆ.

ಶ್ರೀ ಶಿವನಂಜೇಗೌಡ.—ಡಿ.ಡಿ.ಟಿ. ಪ್ರಯೋಗ ವನ್ನು ಈಗ ಎಲ್ಲೆಲ್ಲಿ ಮಾಡಿಸಿದೆಯೋ ಅಲ್ಲೆಲ್ಲಾ ಮಲೇರಿಯಾ ಹಾವಳಿ ಕಡಮೆ ಆಗಿದೆಯು ಎಂಬುದನ್ನು ಸರ್ವೆ ಮಾಡಿಸಿ ನೋಡಿದ್ದಿರಾ?

ಶ್ರೀ ಟಿ. ಚನ್ನಯ್ಯ.—ಬಹಳ ಅನುಕೂಲವಾಗಿದೆ ಯೆಂದು ತಿಳಿದುಬಂದಿದೆ.

Sri K. PUTTASWAMY.—Has it come to the notice of the Government that a sort of immunity has developed in mosquitoes against D.D.T. ?

Sri T. CHANNIAH.—Not in all cases; but in few cases it is so.

Sri K. PUTTASWAMY.—May I know what those few cases are ?

Sri T. CHANNIAH.—I cannot say offhand now.

Sri K. PUTTASWAMY.—May I know at least any one case ?

Sri K. HANUMANTHAIYA.—It is not possible to trace these mosquitoes, Sir. (*Laughter*).

Mr. SPEAKER.—Government might have received reports from some places; notin some cases. (*Laughter*).

Sri K. PUTTASWAMY.—That may be a fact. May I know the steps that Government have taken to get this examined ?

Sri K. HANUMANTHAIYA.—The Hon'ble Member has got in mind what may be called the scientific discovery that after some time the D.D.T. spraying will have no effect. But, that is still a long way off and I do not suppose that D.D.T. has proved to be ineffective. If and when D.D.T. becomes ineffective, the scientists and the concerned department will do the needful.

Municipal Councils (Reconstitution).

Q.—388. Sri S. GOPALA GOWDA (Sagar-Hosanager).—

Will the Government be pleased to state :—

(*a*) the steps taken for reconstituting the municipal councils in the State;

(*b*) whether it has come to their notice that in several municipalities serious lapses in keeping up calendar of events have happened;

(*c*) whether it is a fact that electoral rolls and other forms are not supplied in time;

(*d*) whether Government have taken steps to conduct the elections in a free and fair manner ?